ಆಂತರಿಕ ಗುಣಮಟ್ಟ ಭರವಸೆ ಕೋಶ
ಕನ್ನಡ ವಿಶ್ವವಿದ್ಯಾಲಯ,ಹಂಪಿ
ವಿದ್ಯಾರಣ್ಯ 583 276
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ, ದೂರವಾಣಿ: 08394-241919

ಕವಿಹಂ:ಐಕ್ಯೂಎಸಿ:05:2017-18/131. ದಿನಾಂಕ:22.09.2018

ಇವರಿಗೆ
ಸಂಚಾಲಕರು
ಗೌರ್ನಿಂಗ್ ಕೌನ್ಸಿಲ್
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ.

ಮಾನ್ಯರೆ,

ಆಂತರಿಕ ಗುಣಮಟ್ಟ ಭರವಸೆ ಕೋಶ (IQAC) ವು ನ್ಯಾಕ್ ಮೌಲ್ಯಮಾಪನಕ್ಕಾಗಿ ಹಳೇ ವಿದ್ಯಾರ್ಥಿಗಳು, ಪ್ರಸ್ತುತ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಫೀಡ್‌ಬ್ಯಾಕ್‌ಗಳನ್ನು ಪಡೆದು ಶೇಕಡವಾರು ಮೌಲ್ಯಾಂಕವನ್ನು ಸಿದ್ಧಪಡಿಸಿ ಗೌರ್ನಿಂಗ್ ಕೌನ್ಸಿಲ್‌ಗೆ ಸಲ್ಲಿಸಿದ ವಿವರ ಈ ಕೆಳಕಂಡಂತಿದೆ.

1) ಹಳೇ ವಿದ್ಯಾರ್ಥಿಗಳಿಗೆ ಫೀಡ್‌ಬ್ಯಾಕ್ ಸಲುವಾಗಿ ಆನ್‌ಲೈನ್ ಮೂಲಕ ಪ್ರಶ್ನಾವಳಿಗಳನ್ನು ಕಳುಹಿಸಿತ್ತು. ವಿದ್ಯಾರ್ಥಿಗಳು 5 ಮತ್ತು 3 ಮಾನದಂಡಗಳ ಮೇಲೆ 0--4 ಅಂಕಗಳ ಪರಿಧಿಯಲ್ಲಿ ಮೌಲ್ಯಮಾಪನ ಮಾಡಿದ್ದರು. ಪ್ರತಿಯೊಬ್ಬ ಅಧ್ಯಾಪಕರು ಹಾಗೂ ವಿಭಾಗ ಗಳಿಸಿದ ಅಂಕಗಳ ಶೇಕಡವಾರು ಮೌಲ್ಯಾಂಕವನ್ನು ದಾಖಲಿಸಿ ಐಕ್ಯೂಎಸಿಯು ಗೌರ್ನಿಂಗ್ ಕೌನ್ಸಿಲ್‌ಗೆ ಸಲ್ಲಿಸಿದೆ.

2) 2016--17ನೇ ಸಾಲಿನ ವಿದ್ಯಾರ್ಥಿಗಳಿಗೆ ಪ್ರಶ್ನಾವಳಿಗಳನ್ನು ಸ್ಥಳದಲ್ಲಿಯೇ ಖುದ್ದಾಗಿ ನೀಡಿ ಫೀಡ್‌ಬ್ಯಾಕ್ ಪಡೆದು ವಿದ್ಯಾರ್ಥಿಗಳು 0--4 ಪರಿಧಿಯಲ್ಲಿ ನೀಡಿದ ಅಂಕಗಳ ಆಧಾರದಲ್ಲಿ ಪ್ರತಿಯೊಬ್ಬ ಅಧ್ಯಾಪಕರು ಹಾಗೂ ವಿಭಾಗ ಗಳಿಸಿದ ಶೇಕಡವಾರು ಮೌಲ್ಯಾಂಕವನ್ನು ದಾಖಲಿಸಿ ಐಕ್ಯೂಎಸಿಯು ಗೌರ್ನಿಂಗ್ ಕೌನ್ಸಿಲ್‌ಗೆ ಸಲ್ಲಿಸಿದೆ.

3) ವಿಶ್ವವಿದ್ಯಾಲಯದ ಆಡಳಿತ, ಶೈಕ್ಷಣಿಕ ಮತ್ತು ಮೂಲಭೂತ ಸೌಲಭ್ಯ ಇತ್ಯಾದಿಗಳ ಬಗೆಗೆ ವಿವಿಧ ಇಲಾಖೆಗಳ ಕಾರ್ಯಕ್ಷಮತೆಯನ್ನು ಕಂಡುಕೊಳ್ಳಲು ಪ್ರಶ್ನಾವಳಿಯನ್ನು ಖುದ್ದಾಗಿ ಅಧ್ಯಾಪಕರಿಗೆ ನೀಡಲಾಗಿತ್ತು. 0--5 ಅಂಕಗಳ ಪರಿಧಿಯಲ್ಲಿ 20 ಮಾನದಂಡಗಳಿಗೆ ಅಧ್ಯಾಪಕರು ನೀಡಿದ ಫೀಡ್‌ಬ್ಯಾಕ್‌ನ್ನು ಆಧರಿಸಿ ಶೇಕಡವಾರು ಮೌಲ್ಯಾಂಕ ಪಟ್ಟಿಯನ್ನು ಸಿದ್ಧಪಡಿಸಿ ಐಕ್ಯೂಎಸಿಯು ಗೌರ್ನಿಂಗ್ ಕೌನ್ಸಿಲ್‌ಗೆ ಸಲ್ಲಿಸಿದೆ.

ಮೇಲ್ಕಂಡ ಮಾಹಿತಿಗಳನ್ನು ದಿನಾಂಕ:22.09.2018 ರಂದು ನಡೆಯಲಿರುವ ಐಕ್ಯೂಎಸಿಯು ಗೌರ್ನಿಂಗ್ ಕೌನ್ಸಿಲ್ ಸಭೆಯಲ್ಲಿ ಮಂಡಿಸಲು ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

Registrar
Kannada University, Hampi
Vidyaranya - 583 276
Hospet Taluk, Bellary Dist
(Karnataka)

ಸಹಾಯಕ ನಿರ್ದೇಶಕರು 22/9/18
ಆಂತರಿಕ ಗುಣಮಟ್ಟ ಭರವಸೆ ಕೋಶ
ಕನ್ನಡ ವಿಶ್ವವಿದ್ಯಾಲಯ ಹಂಪಿ.
ವಿದ್ಯಾರಣ್ಯ-583 276.